

ಚಿತ್ರ ಕೃಪೆ: ಆಭರಣ, ಉಡುಪಿ

ಮದುವಣಗಿತ್ತಿಯ ಟ್ರೇಡ್‌ಮಾರ್ಕ್ ಆಭರಣವೆಂದರೆ ಬೈತಲೆ ಮುತ್ತು ಅಥವಾ ಮುಂದಲೆ ಬೊಟ್ಟು. ಉದ್ದನೆಯ ಚೈನಿನ ತುದಿಗೆ ಸಣ್ಣ ಪದಕ, ಅದಕ್ಕೆ ಜೋಲಾಡುವ ಮುತ್ತುಗಳನ್ನು ಕೂರಿಸಿದರಂತೂ ಅದರ ಅಂದಕ್ಕೆ ಸರಿಸಾಟಿ ಯಾವುದೂ ಇಲ್ಲ. ಇತ್ತೀಚೆಗೆ ನರ್ತಕಿಯರು ಧರಿಸುವಂತಹ ಮುಂದಲೆ ಪಟ್ಟಿ ಜನಪ್ರಿಯವಾಗುತ್ತಿದೆ. ಇದು ದೇಗುಲದ ಒಡವೆ ಎಂದೂ ಖ್ಯಾತಿ ಪಡೆದಿದೆ. ಹೆಚ್ಚಾಗಿ ಭರತನಾಟ್ಯಂ ಹಾಗೂ ಕುಚಿಪುಡಿ ನರ್ತಕಿಯರು ಧರಿಸುವಂತಹ ಒಡವೆಗಳು. ಹಣೆಯ ಮೇಲೆ ಪದಕ, ಕಿವಿಯ ಹಿಂಭಾಗದವರೆಗೂ ಬರುವ ಈ ತಲೆಯಾಭರಣಕ್ಕೆ ಸಾಕಷ್ಟು ಕುಸುರಿ ಕೆಲಸ ಮಾಡುವ ಅವಕಾಶಗಳೂ ಇವೆ. ಜೊತೆಗೆ ಇತ್ತೀಚೆಗೆ ವಿವಿಧ ರಂಗಿನ ಹರಳುಗಳನ್ನು ಕೂರಿಸಿದ ಚಿನ್ನದ ಒಡವೆಗಳಿಗೆ ಹೆಚ್ಚು ಬೇಡಿಕೆ ಇದೆ. ವಜ್ರ, ಮಾಣಿಕ್ಯ, ಪಚ್ಚೆ, ನೀಲ ಮೊದಲಾದ ಅಮೂಲ್ಯ ಹರಳುಗಳನ್ನು ಕೂರಿಸಿದರೆ ಮದುವೆ ಮಂಟಪದ ಬೆಳಕಿಗೆ ಮಿಂಚು ಹರಿಸಿ ಸೆಳೆಯುತ್ತವೆ. ಜಡಬಿಲ್ಲೆ ಇತ್ತೀಚಿನ ಟ್ರೆಂಡ್ ಆಗಿದ್ದು ಮದುವಣಗಿತ್ತಿಯ ಹೆರಳಿನ ಅಂದ ಹೆಚ್ಚಿಸುತ್ತದೆ.

ಹಾಗೆ ನೋಡಿದರೆ ಉತ್ತರ ಭಾರತೀಯರು ಕುಂದನ್, ಪೋಲ್ಕಿ, ಮುತ್ತಿನ ಆಭರಣಗಳನ್ನು ಇಷ್ಟಪಟ್ಟರೆ, ದಕ್ಷಿಣ ಭಾರತದಲ್ಲಿ ಈಗಲೂ ಈ ದೇಗುಲದ ಒಡವೆಗಳದ್ದೇ ದರ್ಬಾರು. ಇದರಲ್ಲಿ ಕಾಸಿನ ಸರ ಮುಖ್ಯವಾದದ್ದು. ದೇವಿ ಲಕ್ಷ್ಮಿಯ ಚಿತ್ರವಿರುವ ಈ ಚಿನ್ನದ ಕಾಸುಗಳನ್ನು ಕೆಂಪು ಹರಳುಗಳೊಂದಿಗೆ ಕಪ್ಪು ಅಥವಾ ಕೆಂಪು ದಾರದಲ್ಲಿ ಪೋಣಿಸಿ ಮಾಡುವ ಉದ್ದನೆಯ ಸರ ವಧುವಿನ ಒಟ್ಟಾರೆ ಸೌಂದರ್ಯವನ್ನು ಇಮ್ಮಡಿಸುತ್ತದೆ. ಇದನ್ನು ಧರಿಸುವುದರಲ್ಲೂ ವೈವಿಧ್ಯತೆಗಳಿವೆ. ಉದ್ದನೆಯ ಕಾಸಿನ ಸರವನ್ನು ಕತ್ತಿನ ಸುತ್ತ ಅಪ್ಪಿಕೊಳ್ಳುವಂತಹ ನೆಕ್ಲೇಸ್ ಜೊತೆ ಧರಿಸಬಹುದು. ಮಾವಿನಕಾಯಿ ಆಕಾರದ ನೆಕ್ಲೇಸ್ ಆದರೆ ಆ್ಯಂಟಿಕ್ ಶೋಭೆ ನೀಡುತ್ತದೆ. ಇದು ಕಾಂಜೀವರಂ ಸೀರೆಗೆ ಒಳ್ಳೆಯ ಮ್ಯಾಚಿಂಗ್. ಪದಕವಿರುವ ಎರಡೆಳೆ ಕಾಸಿನ ಸರ ಆಡಂಬರವಾಗಿ ಕಾಣುತ್ತದೆ. ಹಾಗೆಯೇ ಮ್ಯಾಚಿಂಗ್ ಮಾಡಲು ದೇಗುಲದ ಒಡವೆಯ ಶೈಲಿಯಲ್ಲೇ ಒಡ್ಯಾಣ ಅಥವಾ ಸೊಂಟದ ಪಟ್ಟಿ, ವಂಕಿ ಧರಿಸಬಹುದು.

'ದಕ್ಷಿಣ ಭಾರತ ಹಾಗೂ ಉತ್ತರ ಭಾರತ ಎಂದೇನೂ ವ್ಯತ್ಯಾಸ ಉಳಿದಿಲ್ಲ. ಎಲ್ಲರೂ ಎಲ್ಲ ತರಹದ ಆಭರಣಗಳನ್ನು ಕೊಳ್ಳುವುದು ಬೆಂಗಳೂರಿನಲ್ಲಿ ಸಾಮಾನ್ಯ' ಎನ್ನುತ್ತಾರೆ ಶರತ್‌ಕುಮಾರ್.

ಇತ್ತೀಚೆಗೆ ಮೋಹನ ಮಾಲೆ ಗುಂಡುಗಳನ್ನು ಹೊಂದಿದ, ದೊಡ್ಡದಾದ ಪದಕವಿರುವ ಸರ ಜನಪ್ರಿಯ. ಇದನ್ನು ಆ್ಯಂಟಿಕ್ ಆಭರಣದ ಗುಂಪಿಗೆ ಸೇರಿಸಲಾಗಿದ್ದು, ಅಷ್ಟೊಂದು ಹೊಳಪಿರುವುದಿಲ್ಲ. ಆದರೆ ಮದುವೆ ಹೆಣ್ಣಿಗೆ ಶೋಭಿಸುವಂತಹ ಒಡವೆ. ಮಧ್ಯದಲ್ಲಿ ಕೆಂಪು, ಹಸಿರು ಕುಂದನ್ ಹರಳುಗಳಿದ್ದು, ಕಿವಿಯೋಲೆಯನ್ನು ಮ್ಯಾಚಿಂಗ್ ಮಾಡಬಹುದು. ಉದ್ದನೆಯ ಹಲವು ಚೈನ್‌ಗಳನ್ನು ಹೊಂದಿರುವ ಸರವನ್ನೂ ವಧು ಧರಿಸಿದರೆ ಕೊರಳ ತುಂಬ ಒಡವೆಗಳನ್ನು ಧರಿಸಿದಂತೆ ಗೋಚರವಾಗುತ್ತದೆ.

ಕೈಗೆ ಕಡ, ಪಾಟಲಿ, ಬಿಲ್ವಾರದ ಬಳೆಗಳು, ಕೆಂಪಿನ

